# ಕಾರ್ಯಕ್ಷಮತೆ ಸಾರಾಂಶ

## ಸಿಎಜಿ ಏಕೆ ಈ ಲೆಕ್ಕಪರಿಶೋಧನೆ ಮಾಡಿದರು

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್) ಅನ್ನು 1971ರಲ್ಲಿ ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಡಿಯಲ್ಲಿ ಈ ಉದ್ದೇಶಗಳೊಂದಿಗೆ ಸ್ಥಾಪಿಸಲಾಯಿತು : (i) ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಲು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು, (ii) ಮಧ್ಯವರ್ತಿಗಳನ್ನು ತೊಡೆದುಹಾಕುವ ಮೂಲಕ ಸಂಸ್ಥೆಯಿಂದಲೇ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಮೂಲಕ ಮೂಲಸೌಕರ್ಯಗಳನ್ನು ನಿರ್ಮಿಸುವುದು ಮತ್ತು (iii) ಹಣದ ಪೂರ್ಣ ಮೌಲ್ಯವನ್ನು ಜನರಿಗೆ ವರ್ಗಾಯಿಸುವುದು.

ಕಳೆದ ಐದು ವರ್ಷಗಳಲ್ಲಿ ಕೆಆರ್‌ಐಡಿಎಲ್‌ಗೆ ವಹಿಸಲಾದ ಕಾಮಗಾರಿಗಳ ಪ್ರಮಾಣವನ್ನು ಪರಿಗಣಿಸುವುದರ ಜೊತೆಗೆ ಕೆಟಿಪಿಪಿ ಕಾಯ್ದೆಯಡಿ ಕೆಆರ್‌ಐಡಿಎಲ್‌ಗೆ ನೀಡಲಾದ ವಿನಾಯಿತಿಗಳು ಮತ್ತು ಹಿಂದಿನ ಲೆಕ್ಕಪರಿಶೋಧನೆಗಳಲ್ಲಿ ಗಮನಿಸಿದ ಅಂಶಗಳ ಆಧಾರದ ಮೇಲೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 2016–17ರಿಂದ 2020–21ರವರೆಗಿನ ಅವಧಿಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೊಂಡರು. ಕಾಮಗಾರಿಗಳನ್ನು ವಹಿಸುವ ಇಲಾಖೆಗಳ ಕಾರ್ಯವಿಧಾನಗಳು; ಕೆಆರ್‌ಐಡಿಎಲ್‌ನಿಂದ ಕಾರ್ಯಗತಗೊಳಿಸಲಾದ ಕಾಮಗಾರಿಗಳಲ್ಲಿನ ದಕ್ಷತೆ, ಪರಿಣಾಮಕಾರಿತ್ವ ಮತ್ತು ಮಿತವ್ಯಯತೆ; ಕೂಲಿಯಾಳುಗಳು ಮತ್ತು ಸಾಮಗ್ರಿಗಳ ಸಂಗ್ರಹಣೆ; ಆಂತರಿಕ ನಿಯಂತ್ರಣಗಳು ಮತ್ತು ಕೆಆರ್‌ಐಡಿಎಲ್‌ನ ಲೆಕ್ಕಪತ್ರ ವ್ಯವಸ್ಥೆಯನ್ನು ಸಮೀಕ್ಷಿಸುವ ಉದ್ದೇಶದಿಂದ ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

## ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಪ್ರಮುಖ ಅಂಶಗಳು

4(ಜಿ) ವಿನಾಯತಿ ಅಧಿಸೂಚನೆಗೆ ವಿರುದ್ಧವಾಗಿ, ಕಾಮಗಾರಿ ವಹಿಸುವ ಸಂಸ್ಥೆಗಳು ₹2.00 ಕೋಟಿಗಿಂತ ಹೆಚ್ಚಿನ ಮೌಲ್ಯದ ಕಾಮಗಾರಿಗಳನ್ನು ವಹಿಸಿಕೊಡುವಿಕೆಯ ಮಾನದಂಡಗಳಿಗೆ ಹೊಂದಿಕೆಯಾಗಿವಂತೆ ವಿಭಜಿಸುವ ಮೂಲಕ ವಹಿಸಿಕೊಟ್ಟವು ಮತ್ತು ಆ ಮೂಲಕ ನಿಯಮಿತ ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸಿದವು. ಕಾರ್ಯಕ್ರಮ ಆಯೋಜನೆ, ತಡೆರಹಿತ ವಿದ್ಯುತ್ ಸರಬರಾಜು ಉಪಕರಣ (ಯುಪಿಎಸ್), ಭಾರಿ ವಿದ್ಯುತ್ ಪ್ರವಹಣ ಮಾರ್ಗಗಳ ಬದಲಾವಣೆ ಮುಂತಾದ ಅನರ್ಹ ಕಾಮಗಾರಿಗಳನ್ನು ವಹಿಸಿಕೊಟ್ಟಿರುವುದು/ ಕಾರ್ಯಗತಗೊಳಿಸಿರುವುದನ್ನು ಸಹ ಗಮನಿಸಲಾಗಿದೆ

ಸಾಮಗ್ರಿಗಳ ಖರೀದಿ ಯೋಜನೆಯಾಗಲಿ ಅಥವಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಬಾಡಿಗೆಗೆ ಪಡೆದ ಯಂತ್ರೋಪಕರಣಗಳ ವಿವರಗಳಾಗಲಿ ಲಭ್ಯವಿರಲಿಲ್ಲ. ಇಡುಗಂಟು ಮೊತ್ತದ ಆಧಾರದ ಮೇಲೆ ಗುಂಪು ನಾಯಕರುಗಳಿಗೆ ಪಾವತಿ ಮಾಡಲಾಗಿದೆ. ಗುಂಪು ನಾಯಕರುಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ಆಳುಗಳು ಮತ್ತು ಯಂತ್ರೋಪಕರಣಗಳನ್ನು ತರುತ್ತಾರೆ ಎಂಬ ಸರ್ಕಾರದ ಒಪ್ಪಿಗೆಯ ಉತ್ತರವು ಕಾಮಗಾರಿಗಳ ಅನುಷ್ಠಾನಕ್ಕೆ ಉಪ–ಗುತ್ತಿಗೆ ನೀಡಿರುವುದನ್ನು ಸೂಚಿಸುತ್ತದೆ. ಪರೀಕ್ಷಾ–ತನಿಖೆ ಮಾಡಲಾದ ಗುಂಪು ನಾಯಕರುಗಳ ಜಿಎಸ್‌ಟಿ/ಟಿನ್ ಸ್ಥಾನಮಾನವು ಬಿಬಿಎಂಪಿ ದಾಖಲೆಗಳಲ್ಲಿ ಮರುಪರಿಶೀಲನೆಯಿಂದ ಅವರ ಚಟುವಟಿಕೆಯು ಗುತ್ತಿಗೆಕಾರ್ಯ ಎಂಬುದು ತಿಳಿದುಬಂದಿತು. ಹೊರಗುತ್ತಿಗೆ ಸಿಬ್ಬಂದಿ, ಎಇಗಳು ಮತ್ತು ಜೆಇಗಳನ್ನು ಗುಂಪು ನಾಯಕರುಗಳು ಎಂದು ಪರಿಗಣಿಸಲಾಗಿದೆ ಮತ್ತು ಅವರಿಗೆ ಕಾಮಗಾರಿ ಕಾರ್ಯಗತಗೊಳಿಸಿದ್ದಕ್ಕಾಗಿ ಪಾವತಿಗಳನ್ನು ಮಾಡಲಾಗಿದೆ.

ಲೆಕ್ಕಪರಿಶೋಧನೆ ಅವಧಿಯಲ್ಲಿ ಪಡೆದ 84,574 ಕಾಮಗಾರಿಗಳಿಗೆ ಪ್ರತಿಯಾಗಿ, ಕೆಆರ್ಐಡಿಎಲ್‌ಗೆ ಕೇವಲ 24,014 ಕಾಮಗಾರಿಗಳನ್ನು (ಶೇಕಡ 28) ಪೂರ್ಣಗೊಳಿಸಲು ಸಾಧ್ಯವಾಯಿತು. ಹಣ ಲಭ್ಯವಿದ್ದರೂ ಕಾಮಗಾರಿ ಆರಂಭಿಸುವಲ್ಲಿ ಒಂದು ತಿಂಗಳಿನಿಂದ 24 ತಿಂಗಳುಗಳವರೆಗೆ ಮಿತಿಮೀರಿದ ವಿಳಂಬವಾಗಿದೆ. ಕೆಆರ್ಐಡಿಎಲ್ ಲಭ್ಯವಿರುವ ಸಂಪನ್ಮೂಲಗಳು ಮತ್ತು ವಹಿಸಿಕೊಂಡಿರುವ ಕಾಮಗಾರಿಗಳ ತುಲನೆಯಲ್ಲಿ ತನ್ನ ಸಾಮರ್ಥ್ಯವನ್ನು ವಿಶ್ಲೇಷಿಸಲು ಯಾವ ಕಾರ್ಯವಿಧಾನವನ್ನೂ ಹೊಂದಿಲ್ಲ.

₹352.88 ಕೋಟಿಯಿಂದ ₹1,679.74 ಕೋಟಿವರೆಗೆ ಹಣದ ಬಳಕೆಯಾಗಿದ್ದರೆ, ಕೆಆರ್ಐಡಿಎಲ್ ₹2,604 ಕೋಟಿಯಿಂದ ₹4610.35 ಕೋಟಿವರೆಗೆ ಹಣವನ್ನು ಪಡೆದುಕೊಂಡಿದೆ, ಇದರ ಪರಿಣಾಮವಾಗಿ 2020–21ರ ಅಂತ್ಯದಲ್ಲಿ, ₹17,320.30 ಕೋಟಿ ಶಿಲ್ಕು ಸಂಗ್ರಹಗೊಂಡಿತ್ತು. ವಹಿಸಲಾದ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಅಸಮರ್ಥತವಾದ ಕಾರಣ ಕೆಆರ್ಐಡಿಎಲ್‌ನಲ್ಲಿ ಹಣ ಬಳಕೆಯಾಗದೆ ಉಳಿದಂತಾಯಿತು.

₹303.76 ಕೋಟಿಗೆ ವರ್ಕ್ ಕೋಡ್ ನೀಡದಿರುವುದು, ₹389.90 ಕೋಟಿ ಮೊತ್ತದ ಕ್ರೋಢೀಕರಣ ಮುಂಗಡಗಳನ್ನು ಇತ್ಯರ್ಥಪಡಿಸದಿರುವುದು ಮತ್ತು ಅಮಾನತ್ತು ಖಾತೆಯಲ್ಲಿನ ಹಣವು ₹3.95 ಕೋಟಿಯಿಂದ ₹66.92 ಕೋಟಿಗೆ ಹೆಚ್ಚಳವಾಗಿರುವುದು ಆರ್ಥಿಕ ನಿರ್ವಹಣೆ ಕಳಪೆಯಾಗಿರುವುದನ್ನು ಸೂಚಿಸುತ್ತದೆ. ಕೆಆರ್ಐಡಿಎಲ್ ಹಣ ಬಿಡುಗಡೆಗೆ ಮುನ್ನವೇ ವೆಚ್ಚ ಮಾಡಿರುವುದು, ಕಾಮಗಾರಿ ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚಿನ ವೆಚ್ಚ ಮಾಡಿರುವುದು ಮತ್ತು ಅಂದಾಜು ಮೌಲ್ಯಕ್ಕಿಂತಲೂ ಹೆಚ್ಚಿನ ವೆಚ್ಚ ಮಾಡಿರುವುದು ಆರ್ಥಿಕ ನಿಯಂತ್ರಣಗಳು ಕಳಪೆಯಾಗಿರುವುದನ್ನು ಸೂಚಿಸುತ್ತವೆ. ಕಾಮಗಾರಿಯ ಬಿಲ್ಲುಗಳಲ್ಲಿ ರಾಯಧನವನ್ನು ವಸೂಲಿ ಮಾಡದಿರುವುದು ಗುಂಪು ನಾಯಕರುಗಳಿಗೆ ಅನುಚಿತ ಲಾಭ ನೀಡುವಲ್ಲಿ ಮತ್ತು ಸರ್ಕಾರಕ್ಕೆ ಆದಾಯದ ನಷ್ಟದಲ್ಲಿ ಪರಿಣಮಿಸಿತು.

ಕಾಮಗಾರಿಗಳ ಅನುಷ್ಠಾನದಲ್ಲಿ ವಿವಿಧ ಲೋಪದೋಷಗಳು, ಕಾಮಗಾರಿಗಳು ಪೂರ್ಣಗೊಂಡ ಬಗ್ಗೆ ವರದಿ ಮಾಡದಿರುವುದು ಮತ್ತು ಹೆಚ್ಚುವರಿ ವೆಚ್ಚಗಳು, ಅಂತಿಮ ಬಿಲ್‌ಗಳನ್ನು ಸಲ್ಲಿಸದಿರುವುದು ಮತ್ತು ಇತ್ಯರ್ಥಪಡಿಸದಿರುವುದು ಮತ್ತು ಕಾಮಗಾರಿ ವಹಿಸಿದ ಸಂಸ್ಥೆಗಳಿಗೆ ಉಳಿತಾಯ ಹಣವನ್ನು ವರ್ಗಾಯಿಸದಿರುವುದು ಮೇಲ್ವಿಚಾರಣೆ ಮತ್ತು ಅನುಸರಣಾ ಕಾರ್ಯವಿಧಾನದ ಕೊರತೆಯನ್ನು ಸೂಚಿಸುತ್ತವೆ.

ಕೆಆರ್ಐಡಿಎಲ್‌ನಲ್ಲಿ ಗುಣಮಟ್ಟ ನಿಯಂತ್ರಣ ವ್ಯವಸ್ಥೆಯು ಅಸ್ತಿತ್ವದಲ್ಲಿಲ್ಲ. ಮೂರು ಹಂತದ ಗುಣಮಟ್ಟ ನಿಯಂತ್ರಣ ಕಾರ್ಯವಿಧಾನವನ್ನು ನಿಯಮಾನುಸಾರ ಸೂಕ್ತ ರೀತಿಯಲ್ಲಿ ಪಾಲಿಸಲಾಗಿಲ್ಲ. ಮೂರನೇ ವ್ಯಕ್ತಿ ಮೇಲ್ವಿಚಾರಕರನ್ನು ನೇಮಕ ಮಾಡಿಲ್ಲ, ಗುಣಮಟ್ಟ ನಿಯಂತ್ರಣ ವಿಭಾಗಗಳು ನಿಷ್ಕ್ರಿಯವಾಗಿವೆ ಮತ್ತು ಲೋಕೋಪಯೋಗಿ ಇಲಾಖಾ ಕೈಪಿಡಿಯಲ್ಲಿ ನಿಗದಿಪಡಿಸಿದ ಗುಣಮಟ್ಟ ನಿರ್ವಹಣಾ ವ್ಯವಸ್ಥೆ ಮತ್ತು ಗುಣಮಟ್ಟ ಭರವಸೆ ಕಾರ್ಯಕ್ರಮ ಅಸ್ತಿತ್ವದಲ್ಲಿಲ್ಲ.

1974ರಲ್ಲಿ ರೂಪಿಸಲಾದ ಕೆಆರ್ಐಡಿಎಲ್‌ನ ಸ್ಥಾಯಿ ಆದೇಶಗಳನ್ನು ಆನಂತರ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಗಾಗಿ ಕೆಟಿಪಿಪಿ ಕಾಯ್ದೆ, 1999ರ ನಿಬಂಧನೆಗಳನ್ನು ಸೂಕ್ತವಾಗಿ ಅಳವಡಿಸಲು ಪರಿಷ್ಕರಿಸಲಾಗಿಲ್ಲ/ನವೀಕರಿಸಲಾಗಿಲ್ಲ. ಅಗತ್ಯವಿದ್ದಂತಹ ಲೆಕ್ಕಪತ್ರ ನಿಯಂತ್ರಣಗಳಲ್ಲಿ ಕೊರತೆಯು ಸ್ಥಾಯಿ ಆದೇಶಗಳನ್ನು ಕನಿಷ್ಠವಾಗಿ ಅನುಸರಿಸಲಾಗಿರುವುದನ್ನು ಸೂಚಿಸುತ್ತದೆ. ಮಾಸಿಕ

ವರದಿಗಳನ್ನು ಸಲ್ಲಿಸದಿರುವುದರಿಂದಾಗಿ, ಮಂಡಳಿಯು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವಶ್ಯವಿದ್ದ, ಮಾಸಿಕ ಲೆಕ್ಕಪತ್ರಗಳು/ತ್ರೈಮಾಸಿಕ ಹಣಕಾಸು ತಖ್ತೆಗಳನ್ನು ಮೌಲ್ಯಮಾಪನ ಮಾಡಲಾಗಲಿಲ್ಲ

### ಸಿಎಜಿ ಏನು ಶಿಫಾರಸು ಮಾಡಿದ್ದಾರೆ

1. ರಾಜ್ಯ ಸರ್ಕಾರವು ಕಾಮಗಾರಿ ವಹಿಸುವ ಸಂಸ್ಥೆಗಳು ಮತ್ತು ಕೆಆರ್ಐಡಿಎಲ್ ನಡುವೆ ನಿಧಿಗಳ ನಿಯತಕಾಲಿಕ ಸಮನ್ವಯವನ್ನು ಖಚಿತಪಡಿಸಿಕೊಳ್ಳಬೇಕು. ಕಾಮಗಾರಿಗಳ ಅರಂಭಿಸುವಲ್ಲಿನ ವಿಳಂಬಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.
2. ಇಲಾಖೆಗಳು ಟೆಂಡರ್ ಪ್ರಕ್ರಿಯೆ ನಡೆಸದಿರಲು ಕಾರಣಗಳನ್ನು ನೀಡುವ ಜೊತೆಗೆ ಕಾಮಗಾರಿಗಳನ್ನು ನೇರವಾಗಿ ವಹಿಸಿಕೊಡಲು ವಿವರವಾದ ಸಮರ್ಥನೆಯನ್ನು ನೀಡುವುದನ್ನು ರಾಜ್ಯ ಸರ್ಕಾರವು ಕಡ್ಡಾಯಗೊಳಿಸಬೇಕು. ವಹಿಸುವಿಕೆಯ ಷರತ್ತುಗಳನ್ನು ಉಲ್ಲಂಘಿಸಿದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕು.
3. ಅಂದಾಜುಪಟ್ಟಿಗಳ ತಯಾರಿಕೆ, ಪರಿಶೀಲನೆ ಮತ್ತು ಮಂಜೂರಾತಿಯ ಪ್ರತಿ ಹಂತದಲ್ಲಿಯೂ ಜವಾಬ್ದಾರಿ ನಿಗದಿಪಡಿಸಲಾಗಿದೆ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಕೆಆರ್ಐಡಿಎಲ್‌ನ ಸ್ಥಾಯಿ ಆದೇಶಗಳನ್ನು ಸೂಕ್ತವಾಗಿ ಪರಿಷ್ಕರಿಸಬೇಕು
4. ಕೆಆರ್ಐಡಿಎಲ್ ಕಾಮಗಾರಿಗಳನ್ನು ಸ್ವತಃ ನಿರ್ವಹಿಸುತ್ತದೆ ಮತ್ತು ಗುಂಪು ನಾಯಕರುಗಳಿಗೆ ವಹಿಸುವುದಿಲ್ಲ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಟೆಂಡರ್ ಪ್ರಕ್ರಿಯೆ ಅನುಸರಿಸದೆಯೇ ಕಾಮಗಾರಿಗಳನ್ನು ಉಪ-ಗುತ್ತಿಗೆ ನೀಡುವುದಕ್ಕೆ ಹೊಣೆಗಾರಿಕೆ ನಿಗದಿಪಡಿಸಬೇಕು ಹಾಗೂ ಪ್ರತಿ ಕಾಮಗಾರಿಯಲ್ಲಿ ನೇಮಿಸಿಕೊಂಡ ಕೂಲಿಯಾಳುಗಳಿಗೆ ಪಾವತಿಗಳ ವಿವರಗಳನ್ನು ಕೆಆರ್ಐಡಿಎಲ್ ಡಿಜಿಟಲ್ ದತ್ತಾಂಶವಾಗಿ ನಿರ್ವಹಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.
5. ಸಕಾಲದಲ್ಲಿ ಹಣ ಬಿಡುಗಡೆ ಮತ್ತು ಸಕಾಲದಲ್ಲಿ ಕಾಮಗಾರಿಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು, ಬಿಬಿಎಂಪಿಯು ರೂಢಿಸಿಕೊಂಡಿರುವಂತೆ, ಇತರ ಇಲಾಖೆಗಳೂ ಕೆಆರ್ಐಡಿಎಲ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ರಾಜ್ಯ ಸರ್ಕಾರವು ಕಡ್ಡಾಯಗೊಳಿಸಬೇಕು.
6. ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿ ಸಾಮಗ್ರಿಗಳ ಖರೀದಿ ಮಾಡಿರುವುದಕ್ಕೆ ಮತ್ತು ಮಾಪನ ಪುಸ್ತಕಗಳಲ್ಲಿ ಸೂಕ್ತ ರೀತಿಯ ದಾಖಲಾತಿಗಳಿಲ್ಲದೆಯೇ ಪಾವತಿಗಳನ್ನು ಮಾಡಿರುವುದಕ್ಕೆ ರಾಜ್ಯ ಸರ್ಕಾರವು ಹೊಣೆಗಾರಿಕೆ ನಿಗದಿಪಡಿಸಬೇಕು.
7. ರಾಜ್ಯ ಸರ್ಕಾರವು ಕಾಮಗಾರಿಗಳ ತತ್ಕಾಲದ ಮೇಲ್ವಿಚಾರಣೆಗಾಗಿ ಅಸ್ತಿತ್ವದಲ್ಲಿರುವ ಯೋಜನೆ ನಿರ್ವಹಣೆ ಸಾಫ್ಟ್‌ವೇರ್ (ಭೂಸಿರಿ) ಅನ್ನು ಸಾಮಗ್ರಿ ನಿರ್ವಹಣೆ ವ್ಯವಸ್ಥೆಯನ್ನೂ ಒಳಗೊಂಡಂತೆ ಮತ್ತು ವಹಿಸಿದ ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯ ಜಾಡು ಹಿಡಿದು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ವಹಿಸಿದ ಇಲಾಖೆಗಳಿಗೆ ಒಂದು ಮಾಡ್ಯೂಲ್ ಒದಗಿಸಿ ನವೀಕರಿಸಲು/ಮಾರ್ಪಡಿಸಲು ಕೆಆರ್ಐಡಿಎಲ್‌ಗೆ ಸೂಚನೆ ನೀಡಬೇಕು.

8. ರಾಜ್ಯ ಸರ್ಕಾರವು ಮೂರು ಹಂತದ ಗುಣಮಟ್ಟದ ಮೇಲ್ವಿಚಾರಣಾ ವ್ಯವಸ್ಥೆಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ನಿಷ್ಕ್ರಿಯವಾಗಿರುವ ಗುಣಮಟ್ಟ ನಿಯಂತ್ರಣ ವಿಭಾಗಗಳನ್ನು ಕಾರ್ಯೋನ್ಮುಖಗೊಳಿಸಬೇಕು.
9. ಕೆಟಿಪಿಪಿ ಕಾಯ್ದೆಯ ನಿಬಂಧನೆಗಳು, ಲೋಕೋಪಯೋಗಿ ಇಲಾಖೆಯ ಲೆಕ್ಕಪತ್ರ ಕೈಪಿಡಿ ಮತ್ತು ಇಲಾಖಾ ಕೈಪಿಡಿಗಳ ಪರಿಷ್ಕರಣೆಗಳು ಮತ್ತು ಸಂಬಂಧಿತ ಇತರ ಶಾಸನಬದ್ಧ ನಿಯಮಗಳು ಹಾಗೂ ಖರೀದಿ ಮತ್ತು ಅನುಷ್ಠಾನಕ್ಕೆ ಸಂಬಂಧಿತ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಕೆಆರ್ಐಡಿಎಲ್‌ನ ಸ್ಥಾಯಿ ಆದೇಶಗಳ ನಿಯತಕಾಲಿಕ ಪರಿಷ್ಕರಣೆಯನ್ನು ಖಚಿತಪಡಿಸಿಕೊಳ್ಳಬೇಕು. ದರಪಟ್ಟಿ ಮತ್ತು ಚಾಲ್ತಿ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ದರಗಳ ನಿರಂತರ ನವೀಕರಣಕ್ಕಾಗಿ ಕೆಆರ್ಐಡಿಎಲ್ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಬೇಕು.
10. ವಹಿಸಲಾದ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಲಭ್ಯವಿರುವ ಮಾನವಶಕ್ತಿಯ ಆಧಾರದ ಮೇಲೆ ಕೆಆರ್ಐಡಿಎಲ್ ಕಾಮಗಾರಿಗಳನ್ನು ಸ್ವೀಕರಿಸುವುದನ್ನು ಅಥವಾ ನಿರಾಕರಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

## ಲೆಕ್ಕಪರಿಶೋಧನೆಯ ಶಿಫಾರಸುಗಳಿಗೆ ಆಡಳಿತ ಇಲಾಖೆಯ ಪ್ರತಿಕ್ರಿಯೆ

- ಗುಂಪು ನಾಯಕರುಗಳ ಪಟ್ಟಿ ಸಿದ್ಧಪಡಿಸಲಾಗುವುದು ಮತ್ತು ಅದರಂತೆ ಪಾವತಿಗಳನ್ನು ಕ್ರಮಬದ್ಧಗೊಳಿಸಲಾಗುವುದು ಎಂದು ಸರ್ಕಾರವು ಉತ್ತರಿಸಿತು. ವಿಭಾಗಗಳು/ಉಪ–ವಿಭಾಗಗಳು ಶಾಸನಬದ್ಧ ಕಡಿತಗಳನ್ನು ಮಾಡಬೇಕಾಗಿರುವುದರಿಂದ ಮಂಡಳಿಯು ಆನ್‌ಲೈನ್ ಪಾವತಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದೂ ಸರ್ಕಾರವು ತಿಳಿಸಿತು. ಆನ್‌ಲೈನ್ ಪಾವತಿಗಳು ಹೆಚ್ಚು ಪಾರದರ್ಶಕತೆಯನ್ನು ಮತ್ತು ಲೆಕ್ಕಪತ್ರ ನಿರ್ವಹಣೆಯ ಮೇಲೆ ಸೂಕ್ತ ನಿಯಂತ್ರಣವನ್ನು ತರುವುದರಿಂದ ಸರ್ಕಾರದ ಪ್ರತಿಕ್ರಿಯೆಯು ಸ್ವೀಕಾರಾರ್ಹವಾಗಿಲ್ಲ. ಇದಲ್ಲದೆ, ಗುಂಪು ನಾಯಕರುಗಳ ಪಟ್ಟಿ ತಯಾರಿಕೆಯು ಗುತ್ತಿಗೆದಾರರುಗಳನ್ನು ಗುಂಪು ನಾಯಕರುಗಳಾಗಿ ಕ್ರಮಬದ್ಧಗೊಳಿಸುವುದರಲ್ಲಿ ಪರಿಣಮಿಸಬಹುದಾಗಿದೆ.
- 1974ರಲ್ಲಿ ಹೊರಡಿಸಿದ ಸ್ಥಾಯಿ ಆದೇಶಗಳು ಅಂದಿನ ಅಗತ್ಯತೆಗಳಿಗೆ ಅನುಗುಣವಾಗಿದ್ದವು ಆಧಾರದ ಮತ್ತು ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಇಂದಿನ ಅವಶ್ಯಕತೆಗೆ ತಕ್ಕಂತೆ ಸ್ಥಾಯಿ ಆದೇಶಗಳನ್ನು ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ಸರ್ಕಾರವು ಒಪ್ಪಿಕೊಂಡಿತು.